# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 769 (775)
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 20.09.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಮೋಶನ್ ಆಫ್ ಡ್ರಗ್ ಪಾರ್ಕ್ ಯೋಜನೆಯಡಿಯಲ್ಲಿ ಯಾದಗಿರಿ ಜಿಲ್ಲೆ, ಕಡೆಚೂರಿನಲ್ಲಿ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ; | ಕಡೆಚೂರು ಕೈಗಾರಿಕಾ ಪ್ರದೇಶಕ್ಕಾಗಿ 3284 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿದ್ದು, ಇದರಲ್ಲಿ 1510 ಎಕರೆ ಜಮೀನನ್ನು ಪ್ರಮೋಷನ್ ಆಫ್ ಡ್ರಗ್ ಪಾರ್ಕ್‌ಗಾಗಿ ಮೀಸಲಿಡಲಾಗಿದ್ದು, ಉಳಿದ 1774 ಎಕರೆ ವಿಸ್ತೀರ್ಣದಲ್ಲಿ ಕಡೆಚೂರು 1ನೇ ಹಂತದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ. |
| (ಆ) | ಪ್ರಮೋಶನ್ ಆಫ್ ಡ್ರಗ್ ಪಾರ್ಕ್ ಯೋಜನೆಯ ಯೋಜನಾ ವೆಚ್ಚವೆಷ್ಟು; ಇದರಲ್ಲಿ ಕೇಂದ್ರ ಹಾಗೂ ರಾಜ್ಯದ ಪಾಲೆಷ್ಟು; | ಪ್ರಮೋಷನ್ ಆಫ್ ಡ್ರಗ್ ಪಾರ್ಕ್ ಯೋಜನೆಯ ಒಟ್ಟು ಯೋಜನಾ ವೆಚ್ಚವು ರೂ.1400.00 ಕೋಟಿಗಳಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು (70%) ರೂ.1000.00 ಕೋಟಿ ಹಾಗೂ ರಾಜ್ಯ ಸರ್ಕಾರದ ಪಾಲು (30%) ರೂ.400.00 ಕೋಟಿ ಆಗಿರುತ್ತದೆ. |
| (ಇ) | ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು) | ಭಾರತ ಸರ್ಕಾರದ Guidelines of the Scheme for Promotion of Bulk Drug Parks ಅನ್ವಯ ಕಡೆಚೂರು ಕೈಗಾರಿಕಾ ಪ್ರದೇಶದಲ್ಲಿ Bulk Drug Park ಸ್ಥಾಪಿಸುವ ಯೋಜನೆಯ ಪ್ರಸ್ತಾವನೆಗೆ ಅನುಮೋದನೆ ಕೋರಿ ಅಕ್ಟೋಬರ್-2020ನೇ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. |

ಸಂಖ್ಯೆ: ಸಿಐ 243 ಐಎಪಿ (ಇ) 2022

(ಡಾ॥ ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು